ಗ್ರಾಮೀಣ ವಿದ್ಯುದೀಕರಣ ನಿಗಮದಿಂದ ಆರ್ಥಿಕ ನೆರವನ್ನು ಪಡೆಯಲು ಉದ್ದೇಶಿಸಿದ್ದು, ಇದಕ್ಕಾಗಿ ವಿವರವಾದ ಯೋಜನಾ ವರದಿಯನ್ನು ಸಿದ್ದಪಡಿಸಿ ಗ್ರಾಮೀಣ ವಿದ್ಯುದೀಕರಣ ನಿಗಮದ ಮಂಜುರಾತಿಗಾಗಿ ಸಲ್ಲಿಸಲಾಗುವುದು. ಗ್ರಾಮೀಣ ವಿದ್ಯುದೀಕರಣ ನಿಗಮದಿಂದ ಸಾಲ ಸೌಲಭ್ಯ ದೊರೆತ ನಂತರ ಈ ದಿಸೆಯಲ್ಲಿ ಮುಂದಿನ ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತದೆ.

ಮಮದಾಪುರದಲ್ಲಿ 110 ಕೆ.ವಿ. ಸ್ಟೇಷನ್ ಸ್ಥಾಪನೆ

2843 (3607) ಶ್ರೀ ಪಾಟೀಲ್ ಶಿವಾನಂದ ನಿದ್ದರಾಮಗೌಡ (ತಿಕೋಟ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣ ನದಿಯ ಹಿನ್ನೀರಿನಿಂದ ಬಿಜಾಪುರ ತಾಲ್ಲೂಕಿನ 22 ಹಳ್ಳಿಗಳ ಮುಳುಗಡೆಯಾಗುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇಲ್ಲಿನ ಜನರು ಸ್ಥಳಾಂತಾರವಾದಲ್ಲಿ ಅವರಿಗೆ ವಿದ್ಯುತ್ ಪೂರೈಕೆ ಇಲ್ಲದಂತಾಗುವುದು ಸರ್ಕಾರ ಗಮನಿಸಿದೆಯೇ?

ಇ) ಹಾಗಿದ್ದಲ್ಲಿ ಮಮದಾಪುರದಲ್ಲಿ 110 ಕೆ.ವಿ. ಸ್ಟೇಷನ್ ಸ್ಥಾಪಿಸುವುದರಿಂದ ವಿದ್ಯುತ್ ಸಮಸ್ಯೆಯನ್ನು ಪರಿಹರಿಸಿದಂತಾಗುವುದಿಲ್ಲವೇ?

ಈ) ಈ ಸ್ಟೇಷನ್ ಸ್ಥಾಪನೆಗೆ ಭೂ ಸ್ವಾಧೀನ ಪಡಿಸಿಕೊಂಡಿದ್ದರೂ, ಸ್ಥಾಪನಾ ಕಾರ್ಯವು ವಿಳಂಬವಾಗಲು ಕಾರಣವೇನು?

ಉ) ಈ ಸ್ಥಾಪನಾ ಕಾರ್ಯವನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು ಮತ್ತು ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ವೀರಕುಮಾರ್ ಪಾಟೀಲ್ (ಮಾನ್ಯ ಇಂಧನ ರಾಜ್ಯ ಸಚಿವರು) :

ಅ) ಹೌದು, ಗಮನಕ್ಕೆ ಬಂದಿದೆ

ಆ) ಹೌದು, ಗಮನಿಸಿದೆ

ಇ) ಮುಳುಗಡೆಯಾಗುವ ಹಳ್ಳಿಗಳ ಜನರಿಗಾಗಿ ಸರ್ಕಾರವು ನಿರ್ಮಿಸುವ ಪುನರ್ವಸತಿ ಕೇಂದ್ರಗಳಿಗೆ ವಿದ್ಯುತ್ ಪೂರೈಕೆ ಮಾಡಲು ನಿಗಮವು ಈ ಕೆಳಕಂಡ ಕ್ರಮಗಳನ್ನು ಈಗಾಗಲೇ ಕೈಗೊಂಡಿದೆ.

1. ಸದ್ಯಕ್ಕೆ ಬಿಜಾಪುರ ತಾಲ್ಲೂಕಿನ ದೇವರಗೆಣ್ಣೂರು ಮತ್ತು ಗ್ರಾಮಗಳಿಗೆ ಬೀಳಗಿ ಹಾಗೂ ಬಾಗಲಕೋಟೆ ವಿದ್ಯುತ್ ಉಪಕೇಂದ್ರಗಳಿಂದ ಕೃಷ್ಣಾ ನದಿಯ ಹಿನ್ನೀರಿನಲ್ಲಿ ಅರ್ಧ ಮುಳುಗಿರುವ ವಿದ್ಯುತ್ ಮಾರ್ಗಗಳ ಮುಖಾಂತರವಾಗಿಯೇ ವಿದ್ಯುತ್ ಪೂರೈಸಲಾಗುತ್ತಿದೆ.

2. 33:11 ಕೆ.ವಿ. ಬಬಲೇಶ್ವರ ವಿದ್ಯುತ್ ಉಪಕೇಂದ್ರದಲ್ಲಿ ಮೂರನೆಯ 5 ಎಂ.ವಿ.ಎ. ಸಾಮರ್ಥ್ಯದ ಮೂರನೆಯ 5 ಎಂ.ವಿ.ಎ. ಸಾಮರ್ಥ್ಯದ ಪವರ್ ಟ್ರಾನ್ಸ್‌ಫಾರ್ಮರನ್ನು ಹೆಚ್ಚುವರಿಯಾಗಿ

ಅಳವಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಇದರಿಂದಲೇ ದೇವರಗೆಣ್ಣೂರು ಮತ್ತು ಸುತ್ತಮುತ್ತಲಿನ ಹಳ್ಳಿಗಳಿಗೆ ನೂತನ ವಿದ್ಯುತ್ ಮಾರ್ಗಗಳನ್ನು ಕಲ್ಪಿಸಿ ವಿದ್ಯುತ್ ಸರಬರಾಜು ಮಾಡುವುದು. ಈಗಾಗಲೇ ಈ ಕೆಲಸವು ಪ್ರಗತಿಯಲ್ಲಿದ್ದು, ನವೆಂಬರ್-2000ದ ಅಂತ್ಯಕ್ಕೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ.

3. ಮಮದಾಪುರದಲ್ಲಿ ಒಂದು 110 ಕೆ.ವಿ. ವಿದ್ಯುತ್ ಸಬ್ ಸ್ಟೇಷನ್ ಸ್ಥಾಪಿಸಲು ಯೋಜಿಸಿದ್ದು, ಇದಕ್ಕೆ ನಿಗಮದ 112ನೇ ತಾಂತ್ರಿಕ ಸಭೆಯಲ್ಲಿ ಅನುಮೋದನೆ ದೊರಕಿರುತ್ತದೆ. ಅಲ್ಲದೇ ಈ ಕಾರ್ಯಕ್ಕೆ ಗ್ರಾಮೀಣ ವಿದ್ಯುದೀಕರಣ ನಿಗಮದಿಂದ 1198-99ರ ಸಾಲಿನಲ್ಲಿ ಸುಮಾರು 482 ಲಕ್ಷ ರೂ. ಮೊತ್ತದ ಸಾಲ ಸೌಲಭ್ಯದ ಮಂಜೂರಾತಿ ಸಹ ದೊರಕಿರುತ್ತದೆ.

ಈ) ಮತ್ತು ಉ) ನಿಗಮದಲ್ಲಿ ಇತ್ತೀಚೆಗೆ ಎಲ್ಲಾ ವಿದ್ಯುತ್ ಸಬ್ ಸ್ಟೇಷನ್‌ಗಳ ನಿರ್ಮಾಣ ಹಾಗೂ ಅದಕ್ಕೆ ಸಂಬಂಧಿಸಿದ ವಿದ್ಯುತ್ ಪ್ರಸರಣಾ ಮಾರ್ಗಗಳ ಕಾಮಗಾರಿಗಳನ್ನು ಟರ್ನ್‌ಕೀ ಆದಾರದ ಮೇಲೆ ಕಾರ್ಯಗತಗೊಳಿಸಲು ತೀರ್ಮಾನವನ್ನು ಕೈಗೊಳ್ಳಲಾಗಿದೆ. ಅಂತೆಯೇ ಬಿಜಾಪುರ ತಾಲ್ಲೂಕಿನ ಮಮದಾಪುರದಲ್ಲಿ ಒಂದು 110 ಕೆ.ವಿ. ವಿದ್ಯುತ್ ಸಬ್-ಸ್ಟೇಷನ್‌ನ್ನು ಟರ್ನ್‌ಕೀ ಆಧಾರದ ಮೇಲೆ ನಿರ್ಮಾಣ ಮಾಡಲು ಟೆಂಡರ್‌ಗಳನ್ನು ಆಹ್ವಾನಿಸಲಾಗುತ್ತಿದೆ. ಈ ಕಾಮಗಾರಿಯನ್ನು ಪ್ರಾರಂಭ ಮಾಡಿದ ನಂತರ ಪೂರ್ಣಗೊಳಿಸಲು ಕನಿಷ್ಟ 1 ವರ್ಷವಾದರೂ ಬೇಕಾಗುತ್ತದೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದಲ್ಲಿ ಲೈನ್‌ಮೆನ್‌ಗಳ ಕೊರತೆ

2844 (3665) ಶ್ರೀ ಪಾಟೀಲ್ ಜಿ.ಟಿ. (ಬೀಳಗಿ) :-ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದಲ್ಲಿ ಲೈನ್‌ಮನ್‌ಗಳು ಇಲ್ಲದೇ ಮೇಲ್ವಿಚಾರಣೆ (ಲೈನ್ ಹಾಗೂ ಟ್ರಾನ್ಸ್‌ಫಾರ್ಮರ್‌ಗಳು? ಯಾಗದೇ ಇರುವುದರಿಂದ ಕೋಟ್ಯಾಂತರ ರೂಪಾಯಿಗಳು ನಿಗಮಕ್ಕೆ ಹಾನಿಯಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ನಿಗಮದ ವತಿಯಿಂದ ಕೈಗೊಂಡ ಕ್ರಮವೇನು?

ಇ) ಲೈನ್‌ಮೆನ್‌ಗಳನ್ನು ನೇಮಕಾತಿ ಮಾಡಿಕೊಳ್ಳಲು ಕ್ರಮ ಕೈಗೊಳ್ಳಲಾಗಿದೆಯೇ?

ಶ್ರೀ ವೀರಕುಮಾರ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಮತ್ತು ಆ) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದಲ್ಲಿ ಲೈನ್‌ಮೆನ್‌ಗಳ ಕೊರತೆ ಇದೆ. ಈ ತೊಂದರೆಯನ್ನು ನಿವಾರಿಸಲು ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಗ್ಯಾಂಗ್‌ಮೆನ್ ಮಾನ್‌ಸೂನ್ ಗ್ಯಾಂಗ್‌ಮೆನ್‌ಗಳ ನೇಮಕ ಮಾಡಿಕೊಂಡು ನಿರ್ವಹಣೆ, ದುರಸ್ಥಿ ಇತ್ಯಾದಿ ಕೆಲಸಗಳನ್ನು ಮಾಡಿಸಲಾಗುತ್ತಿದೆ. ಇದರಿಂದಾಗಿ ನಿಗಮಕ್ಕೆ ದಿನನಿತ್ಯದ ಕೆಲಸಗಳಿಗೆ ಯಾವ ತೊಂದರೆಯೂ ಇರುವುದಿಲ್ಲ. ಆದ್ದರಿಂದ ನಿಗಮದ ಲೈನ್ ಹಾಗೂ ಟ್ರಾನ್ಸ್‌ಫಾರ್ಮರ್‌ಗಳು ಕೆಟ್ಟು ಕೋಟ್ಯಾಂತರ ರೂಪಾಯಿಗಳು ಹಾನಿಯಾಗುತ್ತಿರುವುದು ಎಂದು ಹೇಳುವುದು ಸರಿಯಲ್ಲ. ಆದರೆ ಅನಧಿಕೃತ